ಸೂಚನೆ ಸಿಕ್ಕಾಗ ಮನೋಬಲ ಹೆಚ್ಚಿತ್ತು. ಹೀಗೇ ನಡೆಸಿದರೆ, ಮಕ್ಕಳ ಮದುವೆಯಾಗಿಬಿಟ್ಟರೆ ಮತ್ತೆ ತನ್ನದೇನು ಹಾಗೋ ಹೀಗೋ ಸಾಗುತ್ತದೆ ಅನ್ನುವ ಭರವಸೆಯಲ್ಲಿದ್ದಳು. ಹೆಣ್ಣುಮಕ್ಕಳಿಗೆ ಬೇಡಿಕೆಯಿರುವ ಕಾಲ. ಎಸ್ಸೆಸ್ಸೆಲ್ಸಿ ಮಾಡಿಕೊಂಡ ಶುಭಾನ್ನ ತನ್ನ ಮಗನಿಗೆ ತಂದುಕೊಳ್ಳಲಿಕ್ಕೆ ವ್ಯಾಗಿನ ಓಣಿ ಚನಬಸಪ್ಪನಿಗೆ ಆಸಕ್ತಿಯಿರುವುದನ್ನು ಅಲ್ಲಿ ಇಲ್ಲಿ ಮಾತಿಗೆ ಸಿಕ್ಕಾಗ ಸುತ್ತಿಬಳಸಿ ಆತನೆ ಸೂಚಿಸಿದ್ದ. ಮಾಲತಿಯು ನೋಡಲಿಕ್ಕೆ ಚೆನ್ನಾಗಿದ್ದಾಳೆ, ಟೈಪಿಂಗ್ ಕಲಿತಿದಾಳೆ. ಅವಳಿಗೂ ಎಲ್ಲೊ ಸಿಕ್ಕೀತು. ಶುಭಾಗೆ ವರದಕ್ಷಿಣೆ ಕೊಡಬೇಕಿಲ್ಲ; ಆದರೆ ಮದುವೆಯನ್ನು ಸುಮಾರಾಗಿಯಾದರೂ ಚನಬಸಪ್ಪನ ಅಂತಸ್ತಿಗೆ ತಕ್ಕಂತೆ ಮಾಡಿಕೊಡಬೇಕು. ಪದ್ಧತಿಯಂತೆ ಬೀಗರಿಗೆ ಮಾಂಸದೂಟ ಹಾಕಬೇಕು. ಪದ್ಮಾವತಿ ಗಳಿಸುತ್ತಿದ್ದರೆ ಅದರಲ್ಲಿ ಇದನ್ನೆಲ್ಲ ಹೇಗೋ ನಿಭಾಯಿಸಬಹುದು ಅನ್ನೋ ಆಸೆ ತನ್ನಲ್ಲಿತ್ತು. ಆ ಸ್ವಾರ್ಥಕ್ಕೆ ಇಪ್ಪತ್ತಾರಾದರೂ ತಾನು ಅವಳಿಗೆ ಹುಡುಕದೆ ಬೇಕಂತ ತಡ ಮಾಡಿದ್ನಾ ಅನ್ನುವ ಪ್ರಶ್ನೆ ಆಗಾಗ ಎದೆಗೆ ಕುಕ್ಕುತ್ತಲೆ ಇರುತ್ತದೆ. ಗಂಡಿನವರು ಯಾರೂ ಆಸಕ್ತಿ ತೋರಿಸಿಲ್ಲ ಅನ್ನುವ ತನ್ನದೇ ನೆಪಕ್ಕೆ ಅಂತರಾತ್ಮ ಚಡಪಡಿಸುತ್ತದೆ. ಈಗಂತೂ ಇದ್ದಬದ್ದ ಆಸೆಯೆಲ್ಲ ಕುಸಿದಿತ್ತು. ಈ ಕೊರೊನಾ ಇನ್ನೂ ಎಷ್ಟುದಿನ ಇರತದೋ ಯಾವಾಗ ಎಲ್ಲಾ ಬಜಾರು ಜಾತ್ರೆ ಅಂತ ನಿಸೂರಾಗಿ ಓಡಾಡಿಕೊಂಡಿರುವಂತಾಗಿ ತನ್ನಂತಹವರಿಗೆ ಒಂದಲ್ಲಾ ಒಂದು ಆದಾಯದ ಹಾದಿ ತೆರೆದುಕೊಳ್ಳುತ್ತದೊ ಅಂತ ತಳಮಳಗೊಂಡಿರುವವಳು ತಾನೊಬ್ಬಳೇ ಅಲ್ಲ; ದುಡಿಯಲು ತಯಾರಿದ್ದರೂ ಕೆಲಸವಿಲ್ಲದವರು; ಶಾಲೆಯಿಲ್ಲದ್ದಕ್ಕೆ ಕುರಿ ಮೇಯಿಸುವ ಮಕ್ಕಳು ಊರಲ್ಲಿದ್ದಾರೆ. ಗಾಯದಮೇಲೆ ಬರೆ ಹಾಕಿದಹಾಗೆ ಹೋದ ಮಳೆಗಾಲದಲ್ಲಿ ಮಳೆಯೂ ಪ್ರಳಯ ಸೃಷ್ಟಿಸಿತ್ತು. ಕಾಗಿಣಾನದಿ ಊರ ಹೊಲಗಳನ್ನೆಲ್ಲ ತೊಳೆದು ಮುಕ್ಕಿ ಕೂತಿದ್ದಕ್ಕೆ ತನ್ನನ್ನು ಕೂಲಿಗೆ ಕರೆಯುವವರಾದರೂ ಯಾರು? ಎಷ್ಟೋಕಡೆ ಮನೆಮಠ, ದನ, ಕುರಿ ಸಮೇತ ಊರಿಗೆ ಊರೇ ನೆರೆನೀರಲ್ಲಿ ತೊಳೆದುಹೋದದ್ದನ್ನು ಚರ್ಚಿಸೋದೇ ಊರವರ ಕೆಲಸವಾಗಿತ್ತು. ಇದ್ದುದರಲ್ಲಿ ತಮ್ಮೂರು ತೊಳೆದುಹೋಗಲಿಲ್ಲ; ಅದೊಂದು ಪುಣ್ಯ. ಆದರೆ, ಮನೆಯಲ್ಲಿ ಸುರಕ್ಷಿತವಾಗಿದ್ದರೆ ಸಾಕೇ? ಹೊಟ್ಟೆಗೆ ಬೇಕಲ್ಲ! ಉಳಿತಾಯವಿರಲಿ ದಿನದೂಟಕ್ಕೇ ಕಣ್ಣಣ್ಣು ಬಿಡುವಂತಾಗಿದೆ. ಶರಣಪ್ಪ ಬಂದಾಗ ತನಗೆ ಮತ್ತೇನು ತೋಚಲಿಲ್ಲ.

'ಹಂಗಾರ ನಾ ಯೇನ್ ಮಾಡ್ಲಿ ಹೇಳು? ನಿನ್ನ ತಂಗ್ಯೇರಿಬ್ರು ಬೆಳದು ನಿಂತಾರ. ಊರಲ್ಲಿ ಹೊಂಟ್ರ ಗಂಡುಗಳು ಅವರತ್ತ ಬಿರಿಬಿರಿ ನೋಡತಾರ...'

'ಅದು ಜಗತ್ತಿದ್ದಾಗಿಂದ ಇರೂದೆ. ಮೈಮ್ಯಾಲ ಬೀಳೋ ಕಾಗೀ ಹಿಕ್ಕಿ ಅಂತಂದ್ಕೊಂಡು ಓಡಾಡಿದ್ರಾತು.'

'ಅದಲ್ಲ ಮಗಳ, ಇವರೂ ಅವರ ಕಡಿ ನೋಡತಾರ. ಹೆಣ್ಣು ಗಂಡಿನ ಜೋಡಿ ಸಂಸಾರ ಮಾಡೂ ಸೆಳೆತ ಜಗತ್ತು ಹುಟಿದಾಗಿಂದ ಬಂದಿದ್ದು. ಮದವಿ ಆಗೂ ಕಾಲಕ್ಕ ಮಾಡೂ ನಮ್ಮ ಜವಾಬದಾರಿ ಬಿಟ್ಟು ಉಳಿದೆಲ್ಲಾ ಮಾತಾಡಿದರ... ಹಡದವರ ತಳಮಳ ಒಂದಾ ಎರಡಾ? ತಪ್ಪು ನಮದದ ಅನ್ನೂದವ್ವ...'

ಹೊರಗೆ ಬಿಸಿಲು ಏರುತ್ತಿತ್ತು. ಅವರಿಬ್ಬರ ನಡುವೆ ಅಸಹನೀಯ ಮೌನ ತಳಮಳಿಸುತ್ತಿತ್ತು. ತಂಗಿಯರಿರುವ ಹಾಲಿನಲ್ಲೂ ಎಲ್ಲಾ ಸದ್ದು ನಿಂತಿತ್ತು. ಒರಗಿದ ಗೋಡೆಯ ಸಾನ್ನಿಧ್ಯದಲ್ಲೆ ಭೂಮಿ ಸೂರ್ಯ ನಕ್ಷತ್ರ ಸಮಸ್ತವೂ ಪದ್ಮಾವತಿಯ ಎದೆಯಲ್ಲಿ ಗಿರಗಿಟ್ಲೆ ಹೊಡೆಯುತ್ತ ಯುಗವೊಂದು ಮಗ್ಗಲು ಬದಲಿಸುತ್ತಿರುವ ಆಟ ಮುಚ್ಚಿದ ಕಣ್ಣುಗಳಡಿ ನಡೆಯುತ್ತಿತ್ತು. ತನಗೆ ಯೌವ್ವನ ಬಂದದ್ದು ಯಾವಾಗ? ತನ್ನನ್ನೂ ಆಸೆಗಣ್ಣಲ್ಲಿ ನೋಡುತ್ತಿದ್ದವೆ ಕೆಲವಾದರು ಕಣ್ಣುಗಳು? ತಾನೂ ಮಿಂಚುಗಣ್ಣು ಹರಿಸಿ ಎದೆಯಲ್ಲಿ ಪುಳಕದ ಅಲೆಗಳನ್ನು ಒಟ್ಟುಮಾಡಿಕೊಳ್ಳಲು ಬಯಸಿದ ಕ್ಷಣಗಳನ್ನು ಭೂತದಲ್ಲಿ